ಸಾಕ್ಷಿ ಯನ್ನು ದಿಃ 21.08.2025 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

1. ನಾನು ದ್ವಿತೀಯ ಪಿಯುಸಿ ಮುಗಿಸಿರುತ್ತೇನೆ.
2. ನಾನು ಮೊದಲು ಬಿ.ಎಸ್.ಎಸ್ ಫೈನಾನ್ಸ್ ಹಾಗೂ ಸಮಸ್ತ ಫೈನಾನ್ಸ್ ನಲ್ಲಿ ಕಲೆಕ್ಷನ್ ಆಫಿಸರ್ ಆಗಿ ಕೆಲಸ ಮಾಡುತ್ತಿದ್ದೆ. ಈಗ ವ್ಯವಸಾಯ ಮಾಡುತ್ತಿದ್ದೇನೆ.
3. ಬಿ.ಎಸ್.ಎಸ್ ಫೈನಾನ್ಸ್ ಹಾಗೂ ಸಮಸ್ತ ಫೈನಾನ್ಸ್ ಪಿರಿಯಾಪಟ್ಟಣದ ಪರಿಸರನಗದಲ್ಲಿದೆ.
4. ಬಿ.ಎಸ್.ಎಸ್ ಫೈನಾನ್ಸ್ ನಲ್ಲಿ 2019 ರಿಂದ 2022 ರ ವರೆಗೆ ಹಾಗೂ ಸಮಸ್ತ ಫೈನಾನ್ಸ್ ನಲ್ಲಿ 2022 ರಿಂದ 2023 ರ ವರೆಗೆ ಕೆಲಸ ಮಾಡಿರುತ್ತೇನೆ.
5. ಕಲೆಕ್ಷನ್ ಆಫಿಸರ್ ಎಂದರೆ, ಸಾಲ ವಸೂಲಿ ಮಾಡುವ ಕೆಲಸ ಎಂದರೆ ಸರಿ.
6. ಬಿ.ಎಸ್.ಎಸ್ ಫೈನಾನ್ಸ್ ನಲ್ಲಿ ನನಗೆ ತಿಂಗಳಿಗೆ ಪೆಟ್ರೋಲ್ ಭತ್ಯೆ ಸೇರಿ 19 ಸಾವಿರ ಸಂಬಳ ಬರುತ್ತಿತ್ತು. ಸದರಿ ಹಣ ನನ್ನ ಖಾತೆಗೆ ಜಮಾ ಆಗುತ್ತಿತ್ತು. ಆಗ ಖರ್ಚು ಕಳೆದು ಎಷ್ಟು ಉಳಿಸುತ್ತಿದ್ದೀರಿ ಎಂದರೆ, ನಾನು ಖರ್ಚು ಮಾಡುತ್ತಿರಲಿಲ್ಲ 19 ಸಾವಿರ ಪೂರ್ತಿ ಉಳಿಸುತ್ತಿದ್ದೆ.
7. ಆ ರೀತಿ ನಾನು 19 ಸಾವಿರ ಹಣವನ್ನು ಸುಮಾರು ಒಂದೂವರೆ ವರ್ಷ ಉಳಿತಾಯ ಮಾಡಿರುತ್ತೇನೆ. ಆ ಬಗ್ಗೆ ಬ್ಯಾಂಕ್ ಖಾತೆ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ.
8. ಸದರಿ ಉಳಿತಾಯದ ಹಣವನ್ನು ಯಾವ ದಿನಾಂಕದಂದು ಪಡೆದಿರಿ ಎಂದರೆ, ದಿನಾಂಕ ನೆನಪಿಲ್ಲ, ನನ್ನ ತಂದೆಗೆ ಅನಾರೋಗ್ಯ ಇದ್ದಾಗ ಸ್ವಲ್ಪ ಪಡೆದಿದ್ದೆ. 5 ಸಾವಿರ 3 ಸಾವಿರದಂತೆ ತೆಗೆಯುತ್ತಿದ್ದೆ, 50 ಸಾವಿರ ಅಥವಾ 1 ಲಕ್ಷ ಯಾವತ್ತೂ ತೆಗೆದಿಲ್ಲ.
9. ಸದರಿ ಖಾತೆಯಲ್ಲಿ ಈಗ ಹಣ ಇರುವುದಿಲ್ಲ.
10. ಸಮಸ್ತ ಫೈನಾನ್ಸ್ ನಲ್ಲಿ ನನಗೆ 24 ವರೆ ಸಾವಿರ ಸಂಬಳ ನೀಡುತ್ತಿದ್ದರು. ಸದರಿ ಹಣದಲ್ಲಿ ತಿಂಗಳ ಖರ್ಚಿಗೆ ಪೂರ್ತಿ ಹಣ ತೆಗೆಯುತ್ತಿದ್ದೆ. ಅದರಲ್ಲಿ ಉಳಿತಾಯ ಆಗುತ್ತಿರಲಿಲ್ಲ ಎಂದರೆ, 7-8 ಸಾವಿರ ಉಳಿತಾಯ ಆಗುತ್ತಿತ್ತು ಎಂದು ನುಡಿಯುತ್ತಾರೆ. ಅಲ್ಲಿ ನಾನು 1 ವರ್ಷ 2 ತಿಂಗಳು ಕೆಲಸ ಮಾಡಿರುತ್ತೇನೆ.
11. ಸದರಿ ಸಂಬಳ ಬಿ.ಎಸ್.ಎಸ್ ಫೈನಾನ್ಸ್ ಸಂಬಳ ಬರುತ್ತಿದ್ದ ಬ್ಯಾಂಕ್ ಖಾತೆಗೆ ಬರುತ್ತಿತ್ತು. ಆ ಬಗ್ಗೆ ಬ್ಯಾಂಕ್ ಸ್ಟೇಟ್ಮೆಂಟ್ ಹಾಜರುಪಡಿಸಲು ತೊಂದರೆ ಇಲ್ಲ.
12. ಫೈನಾನ್ಸ್ ನಲ್ಲಿ ಕೆಲಸ ಮಾಡುವದನ್ನು ಹೊರತುಪಡಿಸಿ, ನನ್ನ ತಂದೆಯ ದಿನಸಿ ಅಂಗಡಿಯ ವ್ಯಾಪಾರ ಸಹ ನೋಡಿಕೊಳ್ಳುತ್ತಿದ್ದೆ.
13. ಬಿ.ಎಸ್.ಎಸ್ ಫೈನಾನ್ಸ್ ಹಾಗೂ ಸಮಸ್ತ ಫೈನಾನ್ಸ್ ಗಳಲ್ಲಿ ಕೆಲಸ ಮಾಡುವ ಸಮಯದಲ್ಲಿ

ನಾನು ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿರಲಿಲ್ಲ, ಕೆಲಸ ಬಿಟ್ಟ ನಂತರ ವ್ಯಾಪಾರ ಮಾಡುತ್ತಿರುತ್ತೇನೆ. ಸದರಿ ಅಂಗಡಿ ವಿರಾಜಪೇಟೆ ತಾಲೂಕಿನ ಚನ್ನಯ್ಯನ ಕೋಟೆ ಗ್ರಾಮದಲ್ಲಿ ಇದೆ.

14. ಸದರಿ ಅಂಗಡಿ ಮೊದಲು ನನ್ನ ತಂದೆ ಹೆಸರಿನಲ್ಲಿ ಇತ್ತು, ಆದರೆ ಅವರಿಗೆ ಪರವಾನಿಗೆ ಇರಲಿಲ್ಲ. ಅಂಗಡಿಗೆ ಹೆಸರು ಇರಲಿಲ್ಲ. ಸದರಿ ಅಂಗಡಿ ಇತ್ತು ಎಂಬ ಬಗ್ಗೆ ಯಾವುದೇ ದಾಖಲೆ ಇಲ್ಲ.

15. ಪರವಾನಿಗೆ ಇಲ್ಲದೆ ಅಂಗಡಿ ನಡೆಸುತ್ತಿದ್ದ ಬಗ್ಗೆ ನಮಗೆ 2021 ರಲ್ಲಿ ಪಂಚಾಯತಿಯಿಂದ ದಂಡ ಹಾಕಿರುತ್ತಾರೆ. ಎಷ್ಟು ದಂಡ ಕಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ರಶೀದಿ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ, ಸಿಕ್ಕರೆ ಕೊಡುತ್ತೇನೆ ಎಂದು ನುಡಿಯುತ್ತಾರೆ.

16. ಎರಡೂ ಫೈನಾನ್ಸ್‌ನಿಂದ ನಾನೇ ಕೆಲಸ ಬಿಟ್ಟಿರುತ್ತೇನೆ. ಅವರು ತೆಗೆದು ಹಾಕಿರುವುದಿಲ್ಲ.

17. ಆರೋಪಿ ನಾನು ಸಾಲ ವಸೂಲಿಗೆ ಹೋಗುವಾಗ ಪರಿಚಯ ಆಗಿರುತ್ತಾರೆ. ಅವರು ಮೇಲೆ ಹೇಳಿದ ಎರಡೂ ಫೈನಾನ್ಸ್ ನಿಂದ ಸಾಲ ಪಡೆದಿದ್ದರು. ಸದರಿ ಪೈನಾನ್ಸ್ ಗಳಲ್ಲಿ ಸಾಲಿ ನೀಡಬೇಕಾದರೆ, ಆಧಾರ್ ಕಾರ್ಡ್, ಪಾನ್ ಕಾರ್ಡ್ ಹಾಗೂ ಬ್ಯಾಂಕ್ ಪಾಸ್ ಪುಸ್ತಕ ಪಡೆದುಕೊಳ್ಳುತ್ತಿದ್ದರು. ಬೇರೆ ಏನೂ ಪಡೆಯುತ್ತಿರಲಿಲ್ಲ.

18. ಆರೋಪಿ ಬಿ.ಎಸ್.ಎಸ್. ಪೈನಾನ್ಸ್ 40 ಹಾಗೂ ಸಮಸ್ತ ಇದಲ್ಲಿ 70 ಸಾವಿರ ಹಾಗೂ 25 ಸಾವಿರ ಸಾಲ ಪಡೆದಿದ್ದರು. ಸದರಿ ಸಾಲವನ್ನು ಮರು ಪಾವತಿ ಮಾಡಿದ್ದಾರಾ ಎಂದರೆ, ನಾನು ಇದ್ದಾಗ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ